



‘ಫ್ಯಾಯೆ ಓಡ್ಲೇ ನ್ಯಾಷನಲ್ ಪಾರ್ಕ್’ ತಾಣಕ್ಕೆ ಹೋಗುವ ನಿಲ್ದಾಣದಂತಿದೆ ಮಗ್ದಲೀನಾ ಹಳ್ಳಿ. ಒಂದಷ್ಟು ಅಂಟಿಕೊಂಡು ರಚನೆಯಾಗಿರುವ ಪುಟ್ಟ ವಾಸದ ಮನೆಗಳು, ಈ ತಾಣದಲ್ಲಿ ವಿಹಾರಕ್ಕಾಗಿ ಬರುವ ಪ್ರವಾಸಿಗರಿಗೆ ಉಳಿಯಲು ಪುಟ್ಟ ಪುಟ್ಟ ಕೆಲವೇ ಗೆಸ್ಟ್ ಹೌಸ್–ಹೋಟೆಲ್‌ಗಳು, ಕಾರುಗಳ ಪಾರ್ಕಿಂಗ್‌ಗೆ ವಿಶಾಲ ಜಾಗ ಬಿಟ್ಟರೆ ಇಲ್ಲಿರುವುದೆಲ್ಲ ಮುಗಿಬಿದ್ದ ಮನಮೋಹಕ ಪ್ರಕೃತಿ. ಈ ಹಳ್ಳಿಯಿಂದ ಮುಂದೆಲ್ಲ ಬಹುದೂರದವರೆಗೆ ಎತ್ತರಕೆ ಕಾಣುವ ಡೋಲೋಮಿಟೆಯ ‘ಟ್ರ್ಯೊಲ್ಲೆನ್ ಸಮ್ಮಿಟ್’(ಪರ್ವತ ತುದಿಯ ಹೆಸರು)ಗೆ ಹೋಗುವುದು ಇಲ್ಲಿಗೆ ಬರುವ ಪ್ರವಾಸಿಗರ ಏಕೈಕ ಗುರಿ. ಈ ತಾಣ ದಟ್ಟ ಮರಗಳಿಂದ ಸಮೃದ್ಧವಾಗಿದ್ದು ಪರಿಸರ ಜೀವಿಗಳ ಆಶ್ರಯತಾಣವೂ ಆಗಿದೆ. ಇವುಗಳ ಅಧ್ಯಯನ ಮತ್ತು ಡೋಲೋಮಿಟಿಕ್ ಎಂಬ ಅಮೂಲ್ಯ ಖನಿಜಾಂಶಗಳನ್ನು ಹೊತ್ತಿರುವ ಡೋಲೋಮಿಟೆ ಪರ್ವತಗಳ ಸೀಳು ಮೇಲ್ಮೈ, ಬಿರುಕಿನ ಬಂಡೆಕಲ್ಲುಗಳು, ಮೊನಚು ಚೂಪನೆಯ ಆಕಾರ ಎಲ್ಲವುಗಳ ಭೂವೈಜ್ಞಾನಿಕ ಅಧ್ಯಯನಕ್ಕೂ ಭೇಟಿ ನೀಡಲು ಈ ಕಣಿವೆ ಬಳಕೆಯಾಗುತ್ತದೆ.

ಈ ‘ನೇಚರ್ ಪಾರ್ಕ್’ ಓಡೆಲ್ ಮತ್ತು ಫ್ಯಾಯೆ ಪರ್ವತಶ್ರೇಣಿಗಳನ್ನು ಒಳಗೊಂಡಿದ್ದು, ಡೋಲೋಮಿಟೆ ಪರ್ವತಶ್ರೇಣಿಗಳ ಕಠಿಣ ಪರಿಶ್ರಮ ಬೇಡದ ಹೈಕಿಂಗ್, ಟ್ರೆಕ್ಕಿಂಗ್‌ಗೆ ಈ ಹಳ್ಳಿ ಅತ್ಯುತ್ತಮ ತಾಣ. ಈ ಹಳ್ಳಿಯಿಂದ ಎತ್ತರದ ‘ವ್ಯೂ ಪಾಯಿಂಟ್’ಗೆ ಸಾಗಲು ಹುಲ್ಲುಗಾವಲಿನ ನಡುವಣ ಕಾಲುದಾರಿಯಲ್ಲಿ ನಡೆಯುತ್ತಾ ಹೋದರೆ, ‘ಪಾಂಡವರು ಇಲ್ಲಿಂದಲೇ ಸ್ವರ್ಗಾರೋಹಣ ಮಾಡಿರಬೇಕು’ ಎನ್ನುವಂತಹ ದೈವಿಕ ಲಹರಿ ಹೊತ್ತಿಸಿಬಿಡುತ್ತದೆ.

ಸಮುದ್ರಮಟ್ಟದಿಂದ 1343 ಮೀಟರ್ ಎತ್ತರದಲ್ಲಿ ನಿಂತಿರುವ ಗೋಥಿಕ್ ಶೈಲಿಯ ಮಗ್ದಲೀನಾ ಚರ್ಚ್‌ನ ಗೋಪುರ ಹಸುರುತಾಣದಲ್ಲಿ ಕಳಶದಂತೆ ಕಾಣುತ್ತದೆ. ಇದರಿಂದಲೇ ಈ ಹಳ್ಳಿ ‘ಮಗ್ದಲೀನಾ’ ಎಂದು ಹೆಸರಾಗಿದೆ.

ಹಚ್ಚಹಸುರ ಇಳಿಜಾರಿನಲ್ಲಿ ಅಲ್ಲೊಂದು, ಇಲ್ಲೊಂದು, ಮೇಲೆ, ಕೆಳಗೆ ಎಂದು ಕಾಣುವ ಪುಟ್ಟ ಪುಟ್ಟ ಇಳಿಜಾರಿನ ಮನೆ, ಕಟ್ಟಡಗಳು ಕಡಿಮೆ ಸಂಖ್ಯೆಯಲ್ಲಿದ್ದು, ಇವುಗಳಿಂದ ಈ ಕಣಿವೆ ಇನ್ನಷ್ಟು ಮನೋಹರವಾಗಿರುವುದಂತೂ ಸುಳ್ಳಲ್ಲ. ಹಿಮಗಾಲದಲ್ಲಿ ಇಡೀ ಪರ್ವತಪ್ರದೇಶ, ಕಣಿವೆ, ಬೆಳ್ಳಗೆ ದೇವಲೋಕವಾಗಿ ಪರಿವರ್ತಿತವಾಗಿಬಿಡುತ್ತದೆ. ಮೇ ಇಂದ ನವೆಂಬರ್‌ವರೆಗೆ ಉತ್ತಮ ಭೇಟಿಯ ಕಾಲ.

ಪ್ರತಿವರ್ಷ ಜುಲೈ ತಿಂಗಳಲ್ಲಿ ಮಗ್ದಲೀನಾ ಚರ್ಚಿನ ಸಾಂಪ್ರದಾಯಿಕ ದಿನವನ್ನು ಆಚರಿಸಲಾಗುತ್ತದೆ. ಮನರಂಜನಾರ್ಥವಾಗಿ ಅಕ್ಟೋಬರ್ ತಿಂಗಳಲ್ಲಿ ‘ಸ್ಪೆಕ್ ಫೆಸ್ಟ್’ ಎಂಬ ಹಬ್ಬವನ್ನೂ ಆಚರಿಸುತ್ತಾರೆ. ಇದು ಈ ಚರ್ಚಿಗೆ ಹೊಂದಿಕೊಂಡು ಇಳಿಯುತ್ತಾ ಹೋಗುವ ಹಸುರು ಹುಲ್ಲುಗಾವಲಿನ ಮೇಲೆ ಸೇರಿ ಆಚರಿಸುವ ಸಂಭ್ರಮದ ಹಬ್ಬ. ಇಲ್ಲಿನವರ ಬದುಕು ಎಷ್ಟು ವರ್ಣಮಯ ಎನ್ನಿಸಿತು ನನಗೆ.

ವಸಂತ ಕಾಲದಲ್ಲಿ ಈ ಹುಲ್ಲುಗಾವಲೆದೆಗಳಲ್ಲಿ ಬಣ್ಣಬಣ್ಣದ ಹೂಗಳೂ ಅರಳುವವೆಂದು ಕೇಳಿದೆ. ಕಲ್ಪನೆಯೇ ಉಲ್ಲಾಸ ತುಂಬಿತು. ಈ ಸಂತ ಮಗ್ದಲೀನಾ ಹಳ್ಳಿ ನಿಜಕ್ಕೂ ಅತ್ಯಪರೂಪದ ಸೌಂದರ್ಯವತಿ. ಎತ್ತರದ ಪರ್ವತಶ್ರೇಣಿಯ ತಪ್ಪಲನ್ನು ತಲುಪಿ, ಆ ದೈತ್ಯಾಕಾರದ ನಿಗೂಢ ಪರ್ವತದೆದುರು ನಿಂತಾಗ ಹಸಿವು, ಬಾಯಾರಿಕೆ, ಆಯಾಸ, ಇಹ ಯಾವುದೂ ನೆನಪಿನಲ್ಲುಳಿಯಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in